





ಗಿಬ್ಬನ್

ಎರಡನ್ನೂ ನೋಡಲು ಒಮ್ಮೆ ಹೋಗಲೇಬೇಕು ಎಂದುಕೊಂಡಿದ್ದೆ.

ಚಿಂಪಾಂಜಿ, ಒರಾಂಗುಟಾನ್ ಮತ್ತು ಗೊರಿಲ್ಲಾಗಳಂತೆ ಗಿಬ್ಬನ್ ಕೂಡ ಬಾಲವಿಲ್ಲದ, ಹೆಚ್ಚಿನ ಬುದ್ದಿ ಶಕ್ತಿಯಿರುವ ಏಪ್ ಪ್ರಭೇದಕ್ಕೆ ಸೇರಿವೆ. ಆಫ್ರಿಕಾ ಭೂಖಂಡದ ಚಿಂಪಾಂಜಿ, ಬೋನಬೋ, ಗೊರಿಲ್ಲಾ ಮತ್ತು ಏಷ್ಯಾದ ಒರಾಂಗುಟಾನ್ 'ಗ್ರೇಟರ್ ಏಪ್' ಎಂದು ವರ್ಗೀಕರಣಗೊಂಡಿದ್ದರೆ, ಗಿಬ್ಬನ್ ಅನ್ನು ಲೆಸ್ಸರ್ ಏಪ್ ಎಂದು ವರ್ಗೀಕರಿಸಲಾಗಿದೆ. ಗಿಬ್ಬನ್ ಪುನಃ ವರ್ಗೀಕರಣಗೊಂಡು ವೆಸ್ಟರ್ನ್ ಹೂಲ್ಲಾಕ್ ಮತ್ತು ಈಸ್ಟರ್ನ್ ಹೂಲ್ಲಾಕ್ ಎಂದು ಗುರುತಿಸಲ್ಪಟ್ಟಿವೆ. ದಕ್ಷಿಣ ಭಾರತದಲ್ಲೆಲ್ಲೂ ಈ ತೆರನಾದ ವಾನರಗಳು ಕಂಡುಬರುವುದಿಲ್ಲ. ಹಾಗಾಗಿ ಇವಕ್ಕೆ ಕನ್ನಡ ಅಥವಾ ದಕ್ಷಿಣದ ಬೇರೆ ಯಾವ ಭಾಷೆಗಳಲ್ಲೂ ಹೆಸರಿಲ್ಲ!

## ಕಾಡಿನ ಮಧ್ಯೆ ರೈಲುದಾರಿ

ಮಂಜಿನಿಂದ ಕೂಡಿದ ರಸ್ತೆಯಲ್ಲಿ ಪ್ರಯಾಣಿಸುತ್ತಾ ವನ್ಯಧಾಮ ಪ್ರವೇಶಿಸಿ–ದಾಗ ಸಮಯ ಬೆಳಿಗ್ಗೆ ಆರು ಗಂಟೆಯಾಗಿತ್ತು. ರಸ್ತೆಯಿಂದ ಸುಮಾರು ಎರಡು ಕಿಲೋ ಮೀಟರ್ ಕ್ರಮಿಸಿದಾಗ ಒಂದು ರೈಲ್ವೆ ಹಳಿ ಎದುರಾಯಿತು. ಟ್ಯಾಕ್ಸಿ ನಿಲ್ಲಿಸಿ ನೋಡಿದರೆ, ರೈಲ್ವೇ ಹಳಿಯು ವನ್ಯಧಾಮವನ್ನು ಸೀಳಿಕೊಂಡು ಹೋಗಿರುವುದು ಕಂಡಿತು. ಹೆಚ್ಚು ಕಮ್ಮಿ ಹುಲಿಯಷ್ಟೇ ಸಂಖ್ಯೆಯಲ್ಲಿರುವ, ವನ್ಯಜೀವಿ ಕಾಯ್ದೆ 1972 ಸೆಕ್ಷನ್ 1ರಲ್ಲಿ ಉಲ್ಲೇಖಗೊಂಡಿರುವ ಗಿಬ್ಬನ್